ಆ) ಹುದ್ದೆಗಳ ಭರ್ತಿಗೆ ಮಂಜೂರಾತಿ ನೀಡುವಾಗ ಬ್ಯಾಂಕಿನ ಆರ್ಥಿಕ ಪರಿಸ್ಥಿತಿ ಮತ್ತು ಹುದ್ದೆಗಳ ಅವಶ್ಯಕತೆಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತಿದೆ.

ಇ) ಸಹಕಾರ ಸಂಸ್ಥೆಗಳ ಆರ್ಥಿಕ ಸಾಧ್ಯತೆಯನ್ನು ಆಧರಿಸಿ ಕಂಪ್ಯೂಟರೀಕರಣಗೊಳಿಸಿ ಸಿಬ್ಬಂದಿ ವೆಚ್ಚವನ್ನು ತಗ್ಗಿಸಬೇಕೆಂಬುದು ಸರ್ಕಾರದ ನಿಲುವಾಗಿದೆ. ಆದರೆ ಸಂಸ್ಥೆಗಳ ಕೆಲಸದ ಒತ್ತಡ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕಂಪ್ಯೂಟರೀಕರಣದ ಹಂತ ಹಂತವನ್ನು ಗಮನದಲ್ಲಿಟ್ಟುಕೊಂಡು ಹುದ್ದೆಗಳಿಗೆ ಅನುಮತಿ ನೀಡಲಾಗುತ್ತಿದೆ.

ಈ) ಹೌದು, 15 ವಿವಿಧ ಹುದ್ದೆಗಳಿಗೆ ಅನುಮತಿ ನೀಡಿದೆ.

1. ಕಿರಿಯ ಸಹಾಯಕರು : ನಗದು ಗುಮಾಸ್ತರು - 12
   ಮೇಲ್ವಿಚಾರಕರು ಹುದ್ದೆಗಳು
2. ಹಿರಿಯ ಸಹಾಯಕರು - 03

ಒಟ್ಟು 15

ನದಿ ತೀರದ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಪರವಾನಗಿ ನವೀಕರಣದಿಂದ ಕಿರುಕುಳ

1627 (2335) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ನದಿ ತೀರದ ರೈತರಿಗೆ ನೀರಾವರಿ ಪಂಪ್‌ಸೆಟ್‌ಗಳಿಗೆ ಎಷ್ಟು ವರ್ಷಗಳ ಅವಧಿಗೆ ಪರವಾನಗಿ ನೀಡಲಾಗುತ್ತಿದೆ;

ಆ) ಪ್ರತಿ ವರ್ಷ ಪರವಾನಗಿ ನವೀಕರಣದಿಂದ ರೈತರಿಗೆ ಕಿರುಕುಳ ಆಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸ್ವಂತ ಬಂಡವಾಳ ಹೂಡಿ, ನೀರಾವರಿ ಮಾಡಿಕೊಂಡು ದೇಶಕ್ಕೆ ಅನ್ನ ಕೊಡುತ್ತಿರುವ ರೈತರಿಗೆ ತೊಂದರೆ ತಪ್ಪಿಸುವ ಸಲುವಾಗಿ ಪರವಾನಗಿ ನವೀಕರಣ ವ್ಯವಸ್ಥೆಯಲ್ಲಿ ಸರ್ಕಾರ ತಿದ್ದುಪಡಿ ತರಲು ಸಿದ್ಧವಿದೆಯೇ?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು) :

ಅ) ನದಿ ತೀರದ ರೈತರ ನೀರಾವರಿ ಪಂಪ್‌ಸೆಟ್‌ಗಳಿಗೆ ಈ ಹಿಂದೆ ಅನಿರ್ದಿಷ್ಟ ಅವಧಿಗೆ ಪರವಾನಗಿ ನೀಡಲಾಗುತ್ತಿತ್ತು, ತದನಂತರ, ಪರವಾನಗಿಯನ್ನು 15 ವರ್ಷಗಳ ಅವಧಿಗೆ ಹಾಗೂ ನಂತರ 5 ವರ್ಷಗಳ ಅವಧಿಗೆ ಸೀಮಿತಗೊಳಿಸಲಾಗಿದೆ.

ಆ) ಹೌದು ಪರವಾನಗಿ ನವೀಕರಣದಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಸ್ವತಃ ಬಂಡವಾಳ ಹೂಡಿ ನೀವಾವರಿ ಸೌಲಭ್ಯ ಕಲ್ಪಿಸಿಕೊಂಡಿರುವ ರೈತರಿಗೆ ಪರವಾನಗಿ ನವೀಕರಣದಿಂದ ಆಗುತ್ತಿರುವ ತೊಂದರೆ ತಪ್ಪಿಸುವ ಸಲುವಾಗಿ ಸರ್ಕಾರ ಸೂಕ್ತ ತಿದ್ದುಪಡಿ ತರಲು ಪರಿಶೀಲಿಸಲಾಗುವುದು.